# ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ, ಮಧುಗಿರಿ

**ಸಿ.ಸಿ.ಸಂಖ್ಯೆ:17/2022** ಪ್ರಾಸಾ-1

ದಿನಾಂಕ:11-03-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಹೆಸರು | ರಂಗನಾಥ |
| ತಂದೆಯ ಹೆಸರು | ರಂಗಧಾಮಪ್ಪ |
| ವಯಸ್ಸು | 36 |
| ಉದ್ಯೋಗ | ಬಿಲ್ ಕಲಕ್ಟರ್ |
| ವಾಸಸ್ಥಳ | ಹೊಸಕೆರೆ ಗ್ರಾಮ |

**ಮುಖ್ಯ ವಿಚಾರಣೆ ಶ್ರೀ. ಆರ್ ಜಿ ಪಿರ್ಯಾದಿ ಪರವ ವಕೀಲರಿಂದ-:**

1 ನೇ ಆರೋಪಿ ನನ್ನ ದೊಡ್ಡಪ್ಪನ ಮಗ ಅಣ್ಣ.ನನ್ನ ತಾತನ ಹೆಸರು ರಂಗಣ್ಣ ಅವರಿಗೆ ಮೂರು ಜನ ಗಂಡು ಮಕ್ಕಳು ಮತ್ತು ಅವರಿಗೆ ಇಬ್ಬರು ಹೆಂಡತಿಯರು ಇದ್ದರು. ಅದರಲ್ಲಿ ನನ್ನ ತಂದೆ ಎರಡನ ಹೆಂಡತಿ ಮಗ. 1 ನೇ ಆರೋಪಿತನು ನನ್ನ ತಾತನ ಮೊದಲನೇಯ ಹೆಂಡತಿಯ ಮೊಮ್ಮಗ. ಸದರಿ 1 ನೇ ಆರೋಪಿತನು ನಮ್ಮ ಕುಟುಂಬದವರಿಗೆ ಮೋಸ ಮಾಡುವ ಉದ್ದೇಶದಿಂದ ನಮ್ಮನ್ನೆಲ್ಲಾ ಕೈ ಬಿಟ್ಟು ವಂಶವೃಕ್ಷವನ್ನು ಸೃಷ್ಟಿಸಿಕೊಂಡಿರುತ್ತಾರೆ. ಹಾಗೂ ಹೊಸಕೆರೆಗ ಗ್ರಾಮದ ಸರ್ವೆ ನಂಬರ್.117/4 ಇ ಸ್ವತ್ತನ್ನು ತಮ್ಮ ಹೆಸರಿಗೆ ಬದಲಾವಣೆ ಮಾಡಿಕೊಂಡಿರತ್ತಾರೆ. ಈ ಬಗ್ಗೆ 2 ಮತ್ತು 3 ನೇ ಆರೋಪಿತರನ್ನು ವಿಚಾರಣೆ ಮಾಡಲಾಗಿ ಸದರಿಯವರು ನಾವು 1 ನೇ ಆರೋಪಿತನ ಹೇಳಿಕೆ ಪಡೆದು ಸರಿಯಾದ ಪ್ರಕ್ರಿಯನ್ನು ಮಾಡಿದ್ದೇವೆ ಎಂಬುದಾಗಿ ನಮ್ಮ ಮೇಲೆ ದಬ್ಬಾಳಿಕೆ ಮಾಡಿರುತ್ತಾರೆ. ಈ ಬಗ್ಗೆ ನಾವು ತಹಶಿಲ್ದಾರ್

ರವರಿಗೆ ಮೌಖಿಕವಾಗಿ ದೂರು ನೀಡಿದ್ದು ಸದರಿಯವರು ಕರೆಸಿ ಹೇಳುತ್ತೇವೆ ಎಂಬುದಾಗಿ ತಿಳಿಸುತ್ತೇವೆ. ಆದರೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಆ ನಂತರ ಈ ಬಗ್ಗೆ ನಾವು ಸಂಬಂದಪಟ್ಟ ಪೊಲೀಸರಿಗೆ ದೂರು ನೀಡಿಲು ಹೋಗಿದ್ದು ಅವರು ನಮ್ಮ ದೂರು ಪಡೆದಿರುವುದಿಲ್ಲ ಬದಲಾಗಿ ಅಂಚೆ ಮೂಲಕ ಅವರಿಗೆ ದೂರನ್ನು ಸಲ್ಲಿಸಿರುತ್ತೇವೆ. ಅದರೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದರಿದಂದ ಆರೋಪಿತನ ವಿರುದ್ದ ಈ ಖಾಸಗಿ ದೂರನ್ನು ದಾಖಲಿಸಿದ್ದು ಕ್ರಮ ತೆಗೆದುಕೊಳ್ಳಬೇಕಾಗಿ ಕೋರಿಕೊಳ್ಳುತ್ತಾರೆ.

(ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು)

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಮಧುಗಿರಿ.**